www.prepp.in



Prepp
Your Personal Exams Guide

1. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಹಿರಿಯ ನಾಗರಿಕರೊಬ್ಬರು ವಾಹನ ಡಿವೈಡರ್‌ಗೆ ಡಿಕ್ಕಿ ಹೊಡೆದು, ಅಪಘಾತಕ್ಕೀಡಾದರು. ಅವರು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ನೀವು ನಿಮ್ಮಿಂದ ನೇಮಕಗೊಂಡ ಚಾಲಕನೊಂದಿಗೆ ಆ ಸ್ಥಳದ ಮೂಲಕ ನಿಮ್ಮ ಕಾರಿನಲ್ಲಿ ತೆರಳುತ್ತಿದ್ದೀರಿ. ಆಗ ನೀವು ಏನು ಮಾಡುತ್ತೀರಿ?

(1) ಅವರನ್ನು ತಮ್ಮ ವಾಹನದಲ್ಲಿ ಅಥವಾ ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಿರಿ.

(2) ಆ ಘಟನೆಯನ್ನು ನೋಡದಂತೆ ನೀವು ತೆರಳುವಿರಿ.

(3) ಪೋಲೀಸರಿಗೆ ತಿಳಿಸಿ, ಮುಂದುವರೆಯುವಿರಿ.

(4) ಆನಂತರ ಪೋಲೀಸರು ಕಿರುಕುಳ ಕೊಡಬಹುದೆಂಬ ಭಯದಿಂದ, ತಕ್ಷಣವೇ ಆ ಸ್ಥಳದಿಂದ ಮಾಯವಾಗುವಿರಿ.

2. ಆಡಳಿತದಲ್ಲಿ ನೀತಿಶಾಸ್ತ್ರ (Ethics in Governance) ಎಂಬ ಶೀರ್ಷಿಕೆಯಡಿಯಲ್ಲಿ ತಮ್ಮ ನಾಲ್ಕನೇ ವರದಿಯನ್ನು ಹೊರ ತಂದ ಎರಡನೇ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರು ಯಾರು?

(1) ಡಾ|| ಜಯಪ್ರಕಾಶ ನಾರಾಯಣ
(2) ಶ್ರೀ ಶಿವರಾಜ ಪಾಟೀಲ್
(3) ಶ್ರೀ ಪ್ರಣಬ್ ಮುಖರ್ಜಿ
(4) ಶ್ರೀ ಎಂ. ವೀರಪ್ಪ ಮೊಯ್ಲಿ

3. ಗೃಹ ಸಚಿವಾಲಯವು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಪೋಲೀಸರು _______ ಪ್ರಖರ ನಿಷ್ಠೆಯನ್ನು ಹೊಂದಿರಬೇಕು.

(1) ಸ್ಥಳೀಯ ರಾಜಕಾರಣಿಗಳಿಗೆ
(2) ವೈಯಕ್ತಿಕ ಆಸಕ್ತಿಗೆ
(3) ಭಾರತದ ಸಂವಿಧಾನಕ್ಕೆ
(4) ಮೇಲಧಿಕಾರಿಗಳಿಗೆ

4. ಈ ಕೆಳಗಿನವುಗಳಲ್ಲಿ ಯಾವುದು ಕರ್ನಾಟಕ ರಾಜ್ಯ ಪೋಲೀಸ್ ಪಡೆಯ ನಿಗದಿತ ನಡವಳಿಕೆಯ ನಿಯಮಾವಳಿಯಲ್ಲ ?

(1) ಜನರು ಮತ್ತು ವಾಹನಗಳ ಕ್ರಮಬದ್ಧ ಚಲನೆಯನ್ನು ಸುಗಮಗೊಳಿಸುವುದು.

(2) ಸಲಹೆ ನೀಡುವುದು ಮತ್ತು ಸಂಘರ್ಷಗಳನ್ನು ಪರಿಹರಿಸುವುದು ಹಾಗೂ ಸೌಹಾರ್ದತೆಯನ್ನು ಉತ್ತೇಜಿಸುವುದು.

(3) ದೈಹಿಕ ಹಾನಿಯ ಅಪಾಯದಲ್ಲಿರುವ ವ್ಯಕ್ತಿಗಳಿಗೆ ನೆರವು ನೀಡುವುದು.

(4) ಖಾಸಗಿ ಉಪಕ್ರಮವನ್ನು ಉತ್ತೇಜಿಸುವುದು ಮತ್ತು ಸಂರಕ್ಷಿಸುವುದು.

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide

5. ಈ ಕೆಳಗಿನ ಯಾವ ಸನ್ನಿವೇಶ/ಗಳಲ್ಲಿ ಹಿತಾಸಕ್ತಿಗಳ ಸಂಘರ್ಷ ಉಂಟಾಗುತ್ತದೆ ಎಂಬುದನ್ನು ಗುರುತಿಸಿ.

(a) ಕಂಪೆನಿಗಳ ನಡುವೆ ಪೈಪೋಟಿಯಿದ್ದಾಗ

(b) ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಒಂದು ಸಭೆಯಲ್ಲಿ ಒಂದು ನಿರ್ದಿಷ್ಟ ವಿಷಯದ ಕುರಿತು ವಾದಿಸಿದಾಗ

(c) ನಿಮ್ಮ ವೈಯಕ್ತಿಕ ಹಿತಾಸಕ್ತಿಯು, ಅಧಿಕೃತ ಕರ್ತವ್ಯಕ್ಕೆ ಎದುರಾದಾಗ (ಸ್ಪರ್ಧೆಗಿಳಿದಾಗ)

(1) (a), (b) ಮತ್ತು (c)
(2) (c) ಮಾತ್ರ
(3) (b) ಮಾತ್ರ
(4) (a) ಮತ್ತು (b)

6. ರಾಜ್ಯ ಶಾಸನಸಭೆಯ ನಾಮನಿರ್ದೇಶಿತ ಸದಸ್ಯರೊಬ್ಬರು ರಾಜ್ಯ ಸರ್ಕಾರದಲ್ಲಿ ಮಂತ್ರಿಯಾಗಿ ನೇಮಕವಾದರೆ, ಅವರು ಯಾವ ಸದನದಲ್ಲಿ/ಸದನಗಳಲ್ಲಿ ಮಾತ್ರ ಮತದಾನ ಮಾಡಬಹುದು?

(1) ಎರಡೂ ಸದನಗಳಲ್ಲಿ
(2) ವಿಧಾನ ಪರಿಷತ್ತಿನಲ್ಲಿ
(3) ವಿಧಾನ ಸಭೆಯಲ್ಲಿ
(4) ಮತದಾನದ ಹಕ್ಕು ಇರುವುದಿಲ್ಲ

7. ಹೈಕೋರ್ಟಿನ ನಿವೃತ್ತ ಖಾಯಂ ನ್ಯಾಯಾಧೀಶರಿಗೆ ನಿವೃತ್ತಿಯ ನಂತರ ಇಲ್ಲಿ ವಕೀಲೀ ವೃತ್ತಿ ಮಾಡಲು ಅನುಮತಿಯಿಲ್ಲ

(1) ಭಾರತದ ಯಾವುದೇ ಕೋರ್ಟ್‌ನಲ್ಲಿ
(2) ಎಲ್ಲಾ ಹೈಕೋರ್ಟ್‌ಗಳಲ್ಲಿ
(3) ಅವರು ನಿವೃತ್ತಿ ಹೊಂದಿದ ಹೈ ಕೋರ್ಟಿನಲ್ಲಿ
(4) ಸರ್ವೋಚ್ಚ ನ್ಯಾಯಾಲಯದಲ್ಲಿ

8. ಭಾರತದ ಸಂಯುಕ್ತ ವ್ಯವಸ್ಥೆ ಈ ದೇಶದ ಮಾದರಿಯನ್ನು ಪ್ರತಿಬಿಂಬಿಸುತ್ತದೆ.

(1) ಆಸ್ಟ್ರೇಲಿಯಾ
(2) ರಷ್ಯಾ
(3) ಅಮೇರಿಕಾ
(4) ಕೆನಡಾ

9. ಈ ಕಾಯ್ದೆಯ ಅಡಿಯಲ್ಲಿ ಭಾರತದಲ್ಲಿ ಸ್ಪೀಕರ್ ಮತ್ತು ಉಪ-ಸ್ಪೀಕರ್ ಹುದ್ದೆಗಳನ್ನು ಸೃಜಿಸಲಾಯಿತು.

(1) 1935ರ ಕಾಯಿದೆ
(2) 1947ರ ಕಾಯಿದೆ
(3) 1909ರ ಕಾಯಿದೆ
(4) 1919ರ ಕಾಯಿದೆ

ಕಚ್ಚಾ ಕೆಲಸಕ್ಕೆ ಸ್ಥಳ

Prepp Your Personal Exams Guide



10. ರಾಜ್ಯಸಭೆ ಹಾಗೂ ಲೋಕಸಭೆಗಳು ಸಮಾನ ಸ್ಥಾನಮಾನ ಹೊಂದಿರುವುದಕ್ಕೆ ಸಂಬಂಧಿಸಿದಂತೆ, ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

(i) ಸಾಮಾನ್ಯ ಮಸೂದೆಗಳ ಮಂಡಣೆ ಹಾಗೂ ಅಂಗೀಕಾರ.

(ii) ರಾಷ್ಟ್ರಪತಿಯವರ ಚುನಾವಣೆ ಹಾಗೂ ಮಹಾಭಿಯೋಗ ಪ್ರಕ್ರಿಯೆ.

(iii) ಹಣಕಾಸು ಮಸೂದೆಯನ್ನು ರಾಜ್ಯಸಭೆ ಹಾಗೂ ಲೋಕಸಭೆಗಳೆರಡರಲ್ಲೂ ಮಂಡಿಸಬಹುದು.

(iv) ಸಂಸತ್ತಿನ ಜಂಟಿ ಅಧಿವೇಶನದ ಅಧ್ಯಕ್ಷತೆಯನ್ನು ಉಪರಾಷ್ಟ್ರಪತಿಯವರು ವಹಿಸುತ್ತಾರೆ.

(1) (i) ಮತ್ತು (ii) ಸರಿಯಾಗಿವೆ.
(2) (iii) ಮತ್ತು (iv) ಸರಿಯಾಗಿವೆ.
(3) (i) ಮತ್ತು (iii) ಸರಿಯಾಗಿವೆ.
(4) (ii) ಮತ್ತು (iv) ಸರಿಯಾಗಿವೆ.

11. ಯಾವ ಸಮಿತಿಯು ಮೂಲಭೂತ ಕರ್ತವ್ಯಗಳನ್ನು ಸಂವಿಧಾನದಲ್ಲಿ ಸೇರಿಸಲು ಶಿಫಾರಸ್ಸು ಮಾಡಿತು?

(1) ಸ್ವರಣ್ ಸಿಂಗ್ ಸಮಿತಿ
(2) ಬಲವಂತ್ ರಾಯ್ ಮೆಹ್ತಾ ಸಮಿತಿ
(3) ಜೆವಿಪಿ ಸಮಿತಿ
(4) ಅಶೋಕ ಮೆಹ್ತಾ ಸಮಿತಿ

12. ಈ ಕೆಳಗಿನ ಯಾವ ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಗಾಂಧೀ ತತ್ವಗಳ ಮೇಲೆ ಆಧಾರಿತವಾಗಿವೆ?

(1) ಗ್ರಾಮ ಪಂಚಾಯತಿಗಳನ್ನು ಸಂಘಟಿಸುವುದು.

(2) ಪುರುಷರು ಮತ್ತು ಮಹಿಳೆಯರಿಗೆ 'ಸಮಾನ ಕೆಲಸಕ್ಕೆ ಸಮಾನ ವೇತನ' ಕಲ್ಪಿಸುವುದು.

(3) ಪ್ರತಿಯೊಬ್ಬರಿಗೂ ಜೀವನಾವಶ್ಯಕ ವಸ್ತುಗಳು ದೊರೆಯುವಂತೆ ಮಾಡುವುದು.

(4) ಅಂತರಾಷ್ಟ್ರೀಯ ಶಾಂತಿಯನ್ನು ಉತ್ತೇಜಿಸುವುದು.

3. ಭಾರತದಲ್ಲಿ 'ರೂಲ್ ಆಫ್ ಲಾ' ಸಿದ್ಧಾಂತವು ಯಾವುದಕ್ಕೆ ಅನ್ವಯಿಸುತ್ತದೆ?

(1) ಸಂಸತ್ತಿನ ಪಾರಮ್ಯತೆ

(2) ಸಂವಿಧಾನದ ಮೇಲಿನ ನ್ಯಾಯಾಂಗದ ಪಾರಮ್ಯತೆ

(3) ಕಾನೂನಿನ ಮುಂದೆ ಸಮಾನತೆ

(4) ಕಾರ್ಯಾಂಗದ ಅನಿಯಂತ್ರಿತ ಅಧಿಕಾರ ಬಳಕೆ

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



Prepp
Your Personal Exams Guide

14. ಭಾರತ ಸಂವಿಧಾನದ ಯಾವ ಅನುಸೂಚಿಯು ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ವಿವರಿಸುತ್ತದೆ?

(1) 7ನೇ ಅನುಸೂಚಿ
(2) 1ನೇ ಅನುಸೂಚಿ
(3) 5ನೇ ಅನುಸೂಚಿ
(4) 8ನೇ ಅನುಸೂಚಿ

15. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಂರಕ್ಷಣಾ ಕಾಯಿದೆ ಯಾವ ವರ್ಷದಲ್ಲಿ ಜಾರಿಗೆ ಬಂದಿತು?

(1) 1998
(2) 1999
(3) 1992
(4) 1993

16. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

(i) ರಾಷ್ಟ್ರಪತಿಗಳ ಇಚ್ಛೆ ಇರುವವರೆಗೆ ರಾಜ್ಯಪಾಲರು ಅಧಿಕಾರದಲ್ಲಿರುತ್ತಾರೆ.

(ii) ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಿಸುತ್ತಾರೆ.

(iii) ರಾಜ್ಯಪಾಲರು ಆ ರಾಜ್ಯದ ಜನರಿಂದ ಚುನಾಯಿತರಾಗುತ್ತಾರೆ.

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

(1) (ii) ಮತ್ತು (iii) ಮಾತ್ರ
(2) (i), (ii) ಮತ್ತು (iii)
(3) (i) ಮತ್ತು (ii) ಮಾತ್ರ
(4) (i) ಮತ್ತು (iii) ಮಾತ್ರ

17. ಈ ಕೆಳಗಿನ ಯಾವುದು ಗ್ರಾಮೀಣ ಸ್ಥಳೀಯ ಸರ್ಕಾರದ ಸಂಸ್ಥೆಗಳ ಸರಿಯಾದ ಕ್ರಮದ ಜೋಡಣೆಯಾಗಿದೆ? (ಕೆಳಹಂತದಿಂದ ಮೇಲಿನ ಹಂತದವರೆಗೆ)

(1) ಗ್ರಾಮ ಪಂಚಾಯತ್ - ತಾಲ್ಲೂಕು ಪಂಚಾಯತ್ - ಜಿಲ್ಲಾ ಪಂಚಾಯತ್

(2) ಗ್ರಾಮ ಪಂಚಾಯತ್ - ಜಿಲ್ಲಾ ಪಂಚಾಯತ್ - ತಾಲ್ಲೂಕು ಪಂಚಾಯತ್

(3) ಜಿಲ್ಲಾ ಪಂಚಾಯತ್ - ಗ್ರಾಮ ಪಂಚಾಯತ್ - ತಾಲ್ಲೂಕು ಪಂಚಾಯತ್

(4) ತಾಲ್ಲೂಕು ಪಂಚಾಯತ್ - ಗ್ರಾಮ ಪಂಚಾಯತ್ - ಜಿಲ್ಲಾ ಪಂಚಾಯತ್

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

18. ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯು (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್) ನಿರ್ವಹಿಸುವ ಕಾರ್ಯ

(a) ಬೋಧನೆ

(b) ತರಬೇತಿ

(c) ಸಂಶೋಧನೆ

(d) ಮುದ್ರಣ

(1) (a), (b) ಮತ್ತು (c) ಮಾತ್ರ

(2) (a), (b), (c) ಮತ್ತು (d)

(3) (b) ಮತ್ತು (d) ಮಾತ್ರ

(4) (b), (c) ಮತ್ತು (d) ಮಾತ್ರ

19. ಹೊಂದಿಸಿ ಬರೆಯಿರಿ.

| ಪಟ್ಟಿ-I (ರಿಟ್‌ಗಳು) | ಪಟ್ಟಿ-II (ಅಧಿಕಾರ ವ್ಯಾಪ್ತಿ) |
|---|---|
| (a) ಹೇಬಿಯಸ್ ಕಾರ್ಪಸ್ | (i) ಕೆಳ ನ್ಯಾಯಾಲಯವು ಈಗಾಗಲೇ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಲು ಹೊರಡಿಸಿದ ತಿದ್ದುಪಡಿ ರಿಟ್ |
| (b) ಮ್ಯಾಂಡಮಸ್ | (ii) ಸಾರ್ವಜನಿಕ ಅಧಿಕಾರಿಯೊಬ್ಬರು ತಮ್ಮ ಕಡ್ಡಾಯ ಕರ್ತವ್ಯವನ್ನು ನಿರ್ವಹಿಸುವಂತೆ ಒತ್ತಾಯಿಸಲು ನ್ಯಾಯಾಲಯ ಹೊರಡಿಸಿದ ಆದೇಶ |
| (c) ಸರ್ಷಿಯಾರರಿ | (iii) ಅಕ್ರಮ ಬಂಧನದಿಂದ ವ್ಯಕ್ತಿಯನ್ನು ರಕ್ಷಣೆ ಮಾಡುತ್ತದೆ |
| (d) ಪ್ರಾಹಿಬಿಷನ್ | (iv) ಕೆಳ ನ್ಯಾಯಾಲಯಕ್ಕೆ ಉನ್ನತ ನ್ಯಾಯಾಲಯವು ಹೊರಡಿಸಿದ ತಡೆ ಆದೇಶ. |

ಸಂಕೇತಗಳು:

(1) a – ii, b – iii, c – iv, d – i

(2) a – iii, b – i, c – iv, d – ii

(3) a – i, b – iii, c – iv, d – ii

(4) a – iii, b – ii, c – i, d – iv

www.prepp.in



20. 'ಸ್ಲ್ಯಾಮ್ ಡಂಕ್' ಎಂಬ ಪದವು ಈ ಕೆಳಗಿನ ಯಾವ ಕ್ರೀಡೆಗೆ ಸಂಬಂಧಿಸಿದೆ?

(1) ಕ್ರಿಕೆಟ್
(2) ಹಾಕಿ
(3) ಬ್ಯಾಸ್ಕೆಟ್‌ಬಾಲ್
(4) ಬೇಸ್‌ಬಾಲ್

21. ಖೈತಾನ್ ಟ್ರೋಫಿಯು ಈ ಕೆಳಗಿನ ಯಾವ ಕ್ರೀಡೆಗೆ ಸಂಬಂಧಿಸಿದೆ?

(1) ಚೆಸ್
(2) ಫುಟ್‌ಬಾಲ್
(3) ಕ್ರಿಕೆಟ್
(4) ಶಟಲ್ ಬ್ಯಾಡ್ಮಿಂಟನ್

22. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಗಳನ್ನು ಗುರುತಿಸಿ.

(a) ಕಬಡ್ಡಿ - ಶಕ್ತಿ ಮತ್ತು ಸ್ಥಿರಯೋಜನೆ
(b) ಮಲ್ಲ ಕಂಬ - ಏರೋಬಿಕ್ಸ್ ಮತ್ತು ಕುಸ್ತಿ
(c) ಗಟ್ಕಾ - ಗೂಳಿ ಕಾಳಗ
(d) ಆಟ್ಯಾ ಪಟ್ಯಾ - ಬೌದ್ಧಿಕ ಸಾಮರ್ಥ್ಯ ಪ್ರದರ್ಶನ

ಕೆಳಗಿನ ಆಯ್ಕೆಗಳನ್ನು ಸರಿಯಾಗಿ ಉತ್ತರಿಸಿ.

(1) (a), (b), (c) ಮತ್ತು (d) ಸರಿಯಾಗಿವೆ
(2) (a) ಮತ್ತು (b) ಸರಿಯಾಗಿವೆ
(3) (a), (b) ಮತ್ತು (d) ಸರಿಯಾಗಿವೆ
(4) (a), (b) ಮತ್ತು (c) ಸರಿಯಾಗಿವೆ

23. ISSF ನ ಸರಿಯಾದ ವಿಸ್ತೃತರೂಪವನ್ನು ಆರಿಸಿ.

(1) ಇಂಡಿಯನ್ ಶೂಟಿಂಗ್ ಸ್ಪೋರ್ಟ್ ಫೆಡರೇಷನ್
(2) ಇಂಡಿಯನ್ ಸ್ಕೂಲ್ ಸ್ಪೋರ್ಟ್ಸ್ ಫೆಡರೇಷನ್
(3) ಇಂಟರ್‌ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ ಫೆಡರೇಷನ್
(4) ಇಂಟರ್‌ನ್ಯಾಷನಲ್ ಸ್ಕೂಲ್ ಸ್ಪೋರ್ಟ್ಸ್ ಫೆಡರೇಷನ್

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

24. ಹೊಂದಿಸಿ ಬರೆದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) SDG-1 | (i) ಶೂನ್ಯ ಹಸಿವು |
| (b) SDG-2 | (ii) ಲಿಂಗ ಸಮಾನತೆ |
| (c) SDG-5 | (iii) ಪರಿಶುದ್ಧ ಇಂಧನ |
| (d) SDG-7 | (iv) ಬಡತನ ಇಲ್ಲದಿರುವಿಕೆ |

ಸಂಕೇತಗಳು:

(1) a – iv, b – iii, c – i, d – ii
(2) a – iii, b – iv, c – ii, d – i
(3) a – iv, b – i, c – ii, d – iii
(4) a – iv, b – ii, c – iii, d – i

25. ಈ ಕೆಳಗಿನ ಯಾವ ಸಮಿತಿಯು ಭಾರತದಲ್ಲಿ ಬಡತನವನ್ನು ಅಂದಾಜಿಸುವುದಕ್ಕೆ ಸಂಬಂಧಿಸಿಲ್ಲ ?

(1) ಎಂ. ನರಸಿಂಹಂ ಸಮಿತಿ
(2) ಲಕಡವಾಲಾ ಸಮಿತಿ
(3) ಸುರೇಶ್ ತೆಂಡೂಲ್ಕರ್ ಸಮಿತಿ
(4) ಸಿ. ರಂಗರಾಜನ್ ಸಮಿತಿ

26. 2026ರ ವಿಶ್ವಪರಿಸರ ದಿನದ ಘೋಷವಾಕ್ಯ –

(1) ಮಾಲಿನ್ಯವನ್ನು ನಿಲ್ಲಿಸಿ, ಜೀವನವನ್ನು ಪ್ರಾರಂಭಿಸಿ.
(2) ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ.
(3) ಪರಿಹಾರದ ಭಾಗವಾಗಿರಬೇಕೇ ಹೊರತು ಮಾಲಿನ್ಯದ ಭಾಗವಾಗಿರಬೇಡಿ.
(4) ಒಂದೇ ಭೂಮಿ, ಬೇರೆ ಪರ್ಯಾಯ ಯೋಜನೆಯಿಲ್ಲ .

27. ಪರಿಸರದ ಸಮಸ್ಯೆಗಳಿಗೆ ಅನ್ವಯಿಸಿ CPCBಯ ವಿಸ್ತೃತ ರೂಪವನ್ನು ತಿಳಿಸಿ.

(1) ಸೆಂಟ್ರಲ್ ಪೊಲ್ಯೂಷನ್ ಸರ್ಟಿಫೈಯಿಂಗ್ ಬಾಡಿ
(2) ಸೆಂಟ್ರಲ್ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್
(3) ಸೆಂಟ್ರಲ್ ಪೊಲ್ಯೂಷನ್ ಕಂಟ್ರೋಲಿಂಗ್ ಬಾಡಿ
(4) ಕಾರ್ಪೊರೇಟ್ ಪ್ರಿವೆನ್ಶನ್ ಅಂಡ್ ಸರ್ಟಿಫಯಿಂಗ್ ಬೋರ್ಡ್

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



28. ಆನೆಕಾಲುರೋಗವು ಕೆಳ ಅಂಗಗಳಲ್ಲಿನ (ಲೋವರ್ ಲಿಂಬ್ಸ್) ದುಗ್ದರಸನಾಳಗಳು ಊದಿಕೊಂಡು ಬರುವಂತಹ ಕಾಯಿಲೆಯಾಗಿದೆ. ಈ ಕಾಯಿಲೆ ತರುವ ರೋಗಜನಕ ಜೀವಿಯ ಹೆಸರು

(1) ಅನ್‌ಸೈಲೋಸ್ಟೋಮಾ

(2) ಟೀನಿಯಾ

(3) ವುಚೇರೇರಿಯಾ

(4) ಅಸ್ಕಾರಿಸ್

29. ಮೂತ್ರಕೋಶದಲ್ಲಿ ರಕ್ತಶೋಧನೆ ಇಲ್ಲಿ ನಡೆಯುತ್ತದೆ.

(1) ಸಂಗ್ರಹಣ ನಳಿಕೆ

(2) ಗ್ಲೋಮೆರುಲಸ್

(3) ಹೆನ್ಲೆ ಕುಣಿಕೆ

(4) ಮೂತ್ರನಾಳ

30. ಕಿಣ್ವದ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುವ ಅಂಶಗಳು

(a) ಉಷ್ಣತೆ

(b) ಪಿ.ಎಚ್. (pH)

(c) ಬೆಳಕು

(d) ಎ.ಟಿ.ಪಿ. (ATP)

(1) (a) ಮತ್ತು (b) ಮಾತ್ರ

(2) (c) ಮತ್ತು (d) ಮಾತ್ರ

(3) (a) ಮತ್ತು (c) ಮಾತ್ರ

(4) (b) ಮತ್ತು (d) ಮಾತ್ರ

31. ಕಾಂಡದ ವಾರ್ಷಿಕ ಉಂಗುರಗಳನ್ನು ಎಣಿಸುವುದರಿಂದ ಒಂದು ಮರದ ವಯಸ್ಸನ್ನು ಅಂದಾಜಿಸಬಹುದು. ಈ ಅಧ್ಯಯನಕ್ಕೆ ಏನೆನ್ನುತ್ತಾರೆ?

(1) ಡೆಂಡ್ರೋಕ್ರೋನೋಲಜಿ

(2) ಆಂಥೋಲಜಿ

(3) ಡೆಂಡ್ರೋಲಜಿ

(4) ಪೋಮೊಲಜಿ

32. ತಪ್ಪಾದ ಹೇಳಿಕೆಯನ್ನು ಗುರುತಿಸಿ.

(1) ಜಯಾ ಮತ್ತು ರತ್ನಾ ಅರೆ-ಕುಬ್ಜ ಗೋಧಿ ತಳಿ ವಿಧಗಳು.

(2) ನಾರ್ಮನ್ ಇ ಬೋರ್ಲಾಗ್ ಅರೆ-ಕುಬ್ಜ ಗೋಧಿ ತಳಿ ವಿಧಗಳನ್ನು ಅಭಿವೃದ್ಧಿಸಿದರು.

(3) ಅಂತರಾಷ್ಟ್ರೀಯ ಅಕ್ಕಿ ಸಂಶೋಧನಾ ಸಂಸ್ಥೆ ಫಿಲಿಪೈನ್ಸ್‌ನಲ್ಲಿದೆ.

(4) ಸೋನಾಲಿಕಾ ಮತ್ತು ಕಲ್ಯಾಣ್ ಸೋನಾ ಉತ್ತಮ ಇಳುವರಿ ನೀಡಬಲ್ಲ ಹಾಗೂ ರೋಗ ನಿರೋಧಕ ಗೋಧಿ ತಳಿವಿಧಗಳು.

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



33. ಪಟ್ಟಿ-Iನ್ನು, ಪಟ್ಟಿ-II ರೊಂದಿಗೆ ಸರಿಯಾದ ಹೊಂದಿಕೆ ಕ್ರಮದಲ್ಲಿ ಗುರುತಿಸಿ. ಕೆಳಗೆ ನೀಡಿರುವ ಸಂಕೇತಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ.

| ಪಟ್ಟಿ-I (ರಾಷ್ಟ್ರೀಯ ಉದ್ಯಾನಗಳು) | ಪಟ್ಟಿ-II (ಸಂರಕ್ಷಿಸಲ್ಪಡುವ ಪ್ರಾಣಿಗಳು) |
|---|---|
| (a) ಜಿಮ್ ಕಾರ್ಬೆಟ್ | (i) ಸಿಂಹ |
| (b) ಕಾಜ಼ಿರಂಗ | (ii) ಜೌಗು ಜಿಂಕೆ (ಬರಸಿಂಗ) |
| (c) ಗಿರ್ | (iii) ಏಕ ಶೃಂಗೀ ಘೇಂಡಾಮೃಗ |
| (d) ಕಾನ್ಹಾ | (iv) ಹುಲಿ |

ಸಂಕೇತಗಳು:

(1) a – iv, b – iii, c – i, d – ii
(2) a – iv, b – i, c – ii, d – iii
(3) a – i, b – ii, c – iii, d – iv
(4) a – iv, b – ii, c – iii, d – i

34. ಕೆಳಗಿನ ಪಟ್ಟಿ-I ರಲ್ಲಿರುವ ಗ್ರಹಗಳನ್ನು, ಅವುಗಳ ಪಟ್ಟಿ-II ರಲ್ಲಿರುವ ಉಪಗ್ರಹಗಳೊಂದಿಗೆ ಹೊಂದಿಸಿ ಬರೆಯಿರಿ.

| ಪಟ್ಟಿ-I (ಗ್ರಹಗಳು) | ಪಟ್ಟಿ-II (ಉಪಗ್ರಹಗಳು) |
|---|---|
| (a) ಶನಿ | (i) ಫೋಬೋಸ್ |
| (b) ಗುರು | (ii) ಟೈಟಾನ್ |
| (c) ಮಂಗಳ | (iii) ಗ್ಯಾನಿಮೀಡ್ |
| (d) ಯುರೇನಸ್ | (iv) ಮಿರಾಂಡಾ |

ಸಂಕೇತಗಳು:

(1) a – iv, b – i, c – ii, d – iii
(2) a – i, b – iv, c – iii, d – ii
(3) a – ii, b – iii, c – i, d – iv
(4) a – iii, b – ii, c – iv, d – i

ಕಚ್ಚಾ ಕೆಲಸಕ್ಕೆ ಸ್ಥಳ

35. ಕೆಳಗಿನ ಹೇಳಿಕೆಗಳನ್ನು ಗಮನಿಸಿ.

ಹೇಳಿಕೆ I: ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೆ ಚಲಿಸಿದಂತೆ ಕಾಣುತ್ತದೆ.

ಹೇಳಿಕೆ II: ಭೂಮಿಯು ತನ್ನ ಅಕ್ಷದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಿರುತ್ತದೆ.

(1) ಹೇಳಿಕೆ I ಹಾಗೂ ಹೇಳಿಕೆ II ಎರಡೂ ಸರಿಯಿವೆ ಹಾಗೂ ಹೇಳಿಕೆ II ಹೇಳಿಕೆ I ರ ಸರಿಯಾದ ವಿವರಣೆಯಾಗಿದೆ.

(2) ಹೇಳಿಕೆ I ಹಾಗೂ ಹೇಳಿಕೆ II ಎರಡೂ ಸರಿಯಿವೆ. ಆದರೆ ಹೇಳಿಕೆ II ಹೇಳಿಕೆ I ರ ಸರಿಯಾದ ವಿವರಣೆಯಾಗಿಲ್ಲ.

(3) ಹೇಳಿಕೆ I ಸರಿ, ಆದರೆ ಹೇಳಿಕೆ II ತಪ್ಪು.

(4) ಹೇಳಿಕೆ I ತಪ್ಪು, ಆದರೆ ಹೇಳಿಕೆ II ಸರಿ.

36. 'ರೋಹಿಣಿ' ಯು

(1) ಭಾರತೀಯ ನೌಕಾದಳ ಅಭಿವೃದ್ಧಿಪಡಿಸಿದ ನೆಲದಿಂದ ನೆಲಕ್ಕೆ ಚಿಮ್ಮುವ ಕ್ಷಿಪಣಿ

(2) ಕಡಿಮೆ ಮಟ್ಟದ ಗುರಿಯನ್ನು ಗುರುತಿಸುವ 2D ಮೊಬೈಲ್ ವಿಚಕ್ಷಣ ರಾಡಾರ್ ವ್ಯವಸ್ಥೆ

(3) DRDO ಅಭಿವೃದ್ಧಿಪಡಿಸಿದ ಖಂಡಾಂತರ ಬ್ಯಾಲಿಸ್ಟಿಕ್ ಮಿಸೈಲ್

(4) DRDO ಅಭಿವೃದ್ಧಿಪಡಿಸಿದ 3D ಮಧ್ಯಮ ವ್ಯಾಪ್ತಿಯ ವಿಚಕ್ಷಣ ರಾಡಾರ್ ವ್ಯವಸ್ಥೆ

37. ಅಡುಗೆ ಅನಿಲ (LPG) ಸೋರುವಿಕೆ ಪತ್ತೆ ಹಚ್ಚಲು ಅಡುಗೆ ಅನಿಲ ಸಿಲಿಂಡರ್‌ಗಳಲ್ಲಿ ಬಳಸುವ ವಾಸನೆಯುಕ್ತ ಅನಿಲ,

(1) ಎಥೆನೆಥಿಯೋಲ್ (2) ಪೆಂಟೇನ್

(3) ಪ್ರೋಪೇನ್ (4) ಬ್ಯೂಟೇನ್

38. ತಂಪು ಪಾನೀಯ ಕಾರ್ಖಾನೆಗಳಲ್ಲಿ ಕೆಲಸಗಾರರು ತಂಪು ಪಾನೀಯ ಬಾಟಲಿಗಳಿಗೆ ಅನಿಲವನ್ನು ತುಂಬಿಸುತ್ತಾರೆ. ಕೆಳಗಿನವುಗಳಲ್ಲಿ ಯಾವುದು/ಯಾವುವು ಸೂಕ್ತ ಅನಿಲ?

(a) $SO_2$

(b) $NO_2$

(c) $O_2$

(d) $CO_2$

(1) (b) ಮತ್ತು (c) (2) (d) ಮಾತ್ರ

(3) (a) ಮತ್ತು (b) (4) (c) ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



Prepp
Your Personal Exams Guide

39. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ ಮತ್ತು ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

ಹೇಳಿಕೆ-I: ಜಠರ ರಸವು (ಗ್ಯಾಸ್ಟ್ರಿಕ್ ಜ್ಯೂಸ್) $H_2SO_4$ ಹೊಂದಿರುತ್ತದೆ.

ಹೇಳಿಕೆ-II: ಆಮ್ಲೀಯತೆಯನ್ನು ಕಡಿಮೆ ಮಾಡಲು ಬೇಕಿಂಗ್ ಸೋಡಾ ಬಳಸಲಾಗುತ್ತದೆ.

(1) ಹೇಳಿಕೆ-I ಸರಿ ಆದರೆ ಹೇಳಿಕೆ-II ತಪ್ಪು.

(2) ಹೇಳಿಕೆ-I ತಪ್ಪು ಆದರೆ ಹೇಳಿಕೆ-II ಸರಿ.

(3) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ.

(4) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ತಪ್ಪು.

40. ಹೊಂದಿಸಿ ಬರೆಯಿರಿ.

| ಪಟ್ಟಿ-I | | ಪಟ್ಟಿ-II | |
|---|---|---|---|
| (a) | ಟೊಮ್ಯಾಟೋ | (i) | ಟಾರ್ಟಾರಿಕ್ ಆಮ್ಲ |
| (b) | ಲಿಂಬೆ | (ii) | ಆಕ್ಸಾಲಿಕ್ ಆಮ್ಲ |
| (c) | ಹುಣಸೆಹಣ್ಣು | (iii) | ಲ್ಯಾಕ್ಟಿಕ್ ಆಮ್ಲ |
| (d) | ಮೊಸರು | (iv) | ಸಿಟ್ರಿಕ್ ಆಮ್ಲ |

ಸಂಕೇತಗಳು:

(1) a – i, b – ii, c – iv, d – iii

(2) a – i, b – iv, c – ii, d – iii

(3) a – ii, b – iv, c – i, d – iii

(4) a – ii, b – i, c – iv, d – iii

41. ಅಲ್ಯುಮಿನಿಯಂ ಲೋಹದ ತುಕ್ಕು ಹಿಡಿಯುವಿಕೆಯನ್ನು ಹೀಗೆ ತಡೆಗಟ್ಟಬಹುದು.

(1) ಬಣ್ಣ ಹಚ್ಚುವುದು

(2) ಗ್ರೀಸ್ ಹಚ್ಚುವುದು

(3) ಗ್ಯಾಲ್ವನೀಕರಣ

(4) ಆನೋಡೀಕರಣ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide



42. ಈಗಿನ ದಿನಗಳಲ್ಲಿ ಅನೇಕ ದೇಶಗಳು, ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಲು ನಿರ್ಲವಣೀಕರಣ (Desalination) ಸ್ಥಾವರಗಳನ್ನು ಉಪಯೋಗಿಸುತ್ತವೆ. ಈ ವಿದ್ಯಮಾನದಲ್ಲಿ ಅಡಗಿರುವ ಪ್ರಕ್ರಿಯೆಯು

(1) ವಿಲೋಮ ಪರಾಸರಣ
(2) ಭಟ್ಟಿ ಇಳಿಸುವಿಕೆ
(3) ಪರಾಸರಣ
(4) ಶೋಧಿಸುವಿಕೆ

43. ಕಾರಿನ ಎಂಜಿನನ್ನು ತಂಪು ಮಾಡಲು ಉಪಯೋಗಿಸುವ ಘನೀಕರಣರೋಧಕ

(1) ಎಥನೋಯಿಕ್ ಆಮ್ಲ
(2) ಎಥಲೀನ್ ಗ್ಲೈಕೋಲ್
(3) ಎಥನಾಲ್
(4) ಮಿಥೇನಾಲ್

44. ಪಟ್ಟಿ-I ನ್ನು, ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಸಂಸ್ಥೆ) | ಪಟ್ಟಿ-II (ಸ್ಥಳ) |
|---|---|
| (a) ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಏಜೆನ್ಸಿ | (i) ಹಾಸನ |
| (b) ISRO ಕೇಂದ್ರ, ಕಛೇರಿ | (ii) ಹೈದರಾಬಾದ್ |
| (c) INSAT ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ | (iii) ಬೆಂಗಳೂರು |
| (d) ಸೌರ ವೀಕ್ಷಣಾಲಯ | (iv) ಉದಯಪುರ |

ಸಂಕೇತಗಳು:

(1) a – i, b – iv, c – iii, d – ii
(2) a – ii, b – iii, c – i, d – iv
(3) a – ii, b – iii, c – i, d – iv
(4) a – iii, b – ii, c – iv, d – i

45. ಕರ್ನಾಟಕದಲ್ಲಿನ ಈ ಕೆಳಕಂಡ ನದಿಗಳನ್ನು ಪರಿಗಣಿಸಿ.

(a) ಭೀಮಾ
(b) ತುಂಗಭದ್ರಾ
(c) ಮಲಪ್ರಭಾ
(d) ಘಟಪ್ರಭಾ

ಇವುಗಳಲ್ಲಿ ಹೆಚ್ಚು ಉದ್ದದಿಂದ ಕಡಿಮೆ ಉದ್ದದ ನದಿಗಳ ಸರಿಯಾದ ಕ್ರಮ ಯಾವುದು?

(1) (d), (a), (b), (c)
(2) (b), (c), (a), (d)
(3) (a), (c), (d), (b)
(4) (c), (b), (a), (d)

Prepp
Your Personal Exams Guide




46. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿ/ಜೋಡಿಗಳನ್ನು ಗುರುತಿಸಿ.

| ವನ್ಯಜೀವಿಧಾಮಗಳು | | ಜಿಲ್ಲೆ |
|---|---|---|
| (a) ರಂಗನತಿಟ್ಟು ಪಕ್ಷಿಧಾಮ | - | ಮೈಸೂರು |
| (b) ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿಧಾಮ | - | ಚಾಮರಾಜನಗರ |
| (c) ದಾರೋಜಿ ಸ್ಲಾತ್ ಕರಡಿ ಅಭಯಾರಣ್ಯ | - | ಬಳ್ಳಾರಿ |
| (d) ಕಪ್ಪತ್ತಗುಡ್ಡ ವನ್ಯಜೀವಿಧಾಮ | - | ಕೋಲಾರ |

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (b), (c) ಮತ್ತು (d)
(2) (b) ಮತ್ತು (c)
(3) (a) ಮತ್ತು (b)
(4) (a) ಮತ್ತು (c)

47. ಕೊಟ್ಟಿರುವ ನಕ್ಷೆಯಲ್ಲಿ ಹಂಚಿಕೆಯಾಗಿರುವ ಭಾರತದ ಪ್ರಧಾನ ಬುಡಕಟ್ಟು ಜನಾಂಗವನ್ನು ಗುರುತಿಸಿ.



(1) ಭಿಲ್ಲರು
(2) ತೋಡರು
(3) ಗೊಂಡರು
(4) ಸಂತಾಲರು

48. ಛಾಯಾ ಭಗವತಿ ಜಲಪಾತವನ್ನು ನಿರ್ಮಿಸಿರುವ ನದಿ ಯಾವುದು?

(1) ಮಲಪ್ರಭಾ
(2) ಭೀಮಾ
(3) ವೇದಾವತಿ
(4) ದೋಣಿ

www.prepp.in

Prepp
Your Personal Exams Guide

49. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಗಳನ್ನು ಗುರುತಿಸಿ.

(a) ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ - ನವದೆಹಲಿ

(b) ನೇತಾಜಿ ಸುಭಾಷ್ ಚಂದ್ರಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ - ಕೋಲ್ಕತ್ತಾ

(c) ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ - ಮುಂಬೈ

(d) ರಾಜೀವಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ - ಶ್ರೀಪೆರಂಬುದೂರು

(1) (b) ಮತ್ತು (d) ಸರಿಯಾಗಿವೆ.
(2) (a), (c) ಮತ್ತು (d) ಸರಿಯಾಗಿವೆ.
(3) (a), (b) ಮತ್ತು (c) ಸರಿಯಾಗಿವೆ.
(4) (b) ಮತ್ತು (c) ಸರಿಯಾಗಿವೆ.

50. ಸಾಗರಗಳಲ್ಲಿ, ಸಾಗರ ಪ್ರವಾಹಗಳು ಒಂದು ವೃತ್ತಾಕಾರದ ಚಲನೆಯನ್ನು ಪೂರ್ಣಗೊಳಿಸಿದರೆ ಅದನ್ನು ಹೀಗೆ ಕರೆಯಲಾಗುವುದು.

(1) ಉಬ್ಬರವಿಳಿತಗಳು
(2) ಅಲೆಗಳು
(3) ಡ್ರಿಫ್ಟ್
(4) ಗೈರ್

51. ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಗಳನ್ನು ಗುರುತಿಸಿ.

(a) ಮುಂಬಯಿ-ಪುಣೆ ಕೈಗಾರಿಕಾ ಪ್ರದೇಶ - ಸೂರತ್

(b) ಛೋಟಾನಾಗ್ಪುರ ಪ್ರದೇಶ - ಸಿಂಧ್ರಿ

(c) ದೆಹಲಿ-ಮೀರತ್ ಪ್ರದೇಶ - ಪಾಣಿಪತ್

(d) ಕೊಲ್ಲಂ-ತಿರುವನಂತಪುರಂ ಕೈಗಾರಿಕಾ ಪ್ರದೇಶ - ಪ್ರಕಾಶಂ

(1) (b), (c) ಮತ್ತು (d) ಸರಿಯಾಗಿವೆ.
(2) (b) ಮತ್ತು (c) ಸರಿಯಾಗಿವೆ.
(3) (a), (b), (c) ಮತ್ತು (d) ಸರಿಯಾಗಿವೆ.
(4) (b) ಮತ್ತು (d) ಸರಿಯಾಗಿವೆ.

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide



52. ಏಷ್ಯಾ ಖಂಡದ ಈ ಕೆಳಗಿನ ನದಿಗಳಲ್ಲಿ ಯಾವ ನದಿ ಪೆಸಿಫಿಕ್ ಸಾಗರವನ್ನು ಸೇರುವುದಿಲ್ಲ ?

(1) ಪರ್ಲ್
(2) ಹ್ವಾಂಗ್ ಹೋ
(3) ಯೆನಿಸ್ಸೆ
(4) ಯಾಂಗ್-ಟ್ಜ-ಕಿಯಾಂಗ್

53. 'ಮೆಸಟಾ ಪ್ರಸ್ಥಭೂಮಿ'ಯು ಯಾವ ಖಂಡದಲ್ಲಿ ಕಂಡು ಬರುತ್ತದೆ?

(1) ಯುರೋಪ್
(2) ಆಫ್ರಿಕಾ
(3) ಉತ್ತರ ಅಮೇರಿಕಾ
(4) ದಕ್ಷಿಣ ಅಮೇರಿಕಾ

54. ಕಾಶ್ಮೀರ ಕಣಿವೆಯು ಈ ಕೆಳಗಿನ ಯಾವ ಶ್ರೇಣಿಗಳ ನಡುವೆ ಕಂಡುಬರುತ್ತದೆ?

(1) ಜಾಸ್ಕರ್ ಮತ್ತು ಲಡಾಕ್ ಶ್ರೇಣಿ
(2) ಸುಲೈಮಾನ್ ಮತ್ತು ಕಿರ್ಥಾರ್ ಶ್ರೇಣಿ
(3) ಪೀರ್ ಪಂಜಾಲ್ ಮತ್ತು ಕಾರಕೋರಮ್ ಶ್ರೇಣಿ
(4) ಪೀರ್ ಪಂಜಾಲ್ ಮತ್ತು ಜಾಸ್ಕರ್ ಶ್ರೇಣಿ

55. ವಾಯುಮಂಡಲದ ಸಂಯೋಜನೆಗೆ ಸಂಬಂಧಿಸಿದಂತೆ ಶೇಕಡಾವಾರು ಪ್ರಮಾಣಕ್ಕನುಗುಣವಾಗಿ ಸರಿಯಾದ ಕ್ರಮವನ್ನು ಗುರುತಿಸಿ.

(1) ಇಂಗಾಲದ ಡೈ ಆಕ್ಸೈಡ್, ಸಾರಜನಕ, ಆಮ್ಲಜನಕ, ಆರ್ಗಾನ್, ನಿಯಾನ್
(2) ಸಾರಜನಕ, ಆಮ್ಲಜನಕ, ಇಂಗಾಲದ ಡೈ ಆಕ್ಸೈಡ್, ನಿಯಾನ್, ಆರ್ಗಾನ್
(3) ಸಾರಜನಕ, ಆಮ್ಲಜನಕ, ಆರ್ಗಾನ್, ಇಂಗಾಲದ ಡೈ ಆಕ್ಸೈಡ್, ನಿಯಾನ್
(4) ಆಮ್ಲಜನಕ, ಇಂಗಾಲದ ಡೈ ಆಕ್ಸೈಡ್, ಸಾರಜನಕ, ನಿಯಾನ್, ಆರ್ಗಾನ್

Prepp
Your Personal Exams Guide



56. ಗ್ರೀನ್‌ವಿಚ್‌ನಲ್ಲಿ ಮಧ್ಯಾಹ್ನ 1 ಗಂಟೆಯಾಗಿದ್ದರೆ, ಹುಬ್ಬಳ್ಳಿಯ (75° ಪೂರ್ವ ರೇಖಾಂಶ) ಸ್ಥಳೀಯ ಕಾಲಮಾನವೇನು?

(1) 6.30 PM
(2) 6.30 AM
(3) 6 PM
(4) 6 AM

57. 'ಇಂಡಿಯನ್ ಅಸೋಸಿಯೇಷನ್ ಆಫ್ ಕಲ್ಕತ್ತಾ' ಸ್ಥಾಪಿಸಿದವರು ______.

(a) ಎಂ.ಜಿ.ರಾನಡೆ

(b) ಆನಂದ ಮೋಹನ್ ಬೋಸ್

(c) ಸುರೇಂದ್ರನಾಥ ಬ್ಯಾನರ್ಜಿ

(d) ವಿಲಿಯಂ ಆ್ಯಡಂ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (c) ಮತ್ತು (d)
(2) (a) ಮತ್ತು (d)
(3) (a) ಮತ್ತು (b)
(4) (b) ಮತ್ತು (c)

58. ಹೊಂದಿಸಿ ಬರೆಯಿರಿ.

| | | | |
|---|---|---|---|
| (a) | ಮೊದಲನೇ ಕರ್ನಾಟಿಕ್ ಯುದ್ಧ | (i) | ವಾಂಡಿವಾಶ್ |
| (b) | ಮೂರನೇ ಕರ್ನಾಟಿಕ್ ಯುದ್ಧ | (ii) | ಸೇಂಟ್ ಥೋಮ್ |
| (c) | ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧ | (iii) | ವಡಾಗಾಂವ್ |
| (d) | ಒಂದನೇ ಆಂಗ್ಲೋ-ಮರಾಠ ಯುದ್ಧ | (iv) | ಮಳವಳ್ಳಿ |

ಸಂಕೇತಗಳು:

(1) a – iv, b – iii, c – ii, d – i

(2) a – i, b – iii, c – iv, d – ii

(3) a – ii, b – i, c – iv, d – iii

(4) a – iii, b – ii, c – iv, d – i

www.prepp.in

Prepp
Your Personal Exams Guide



59. ಕೌಟಿಲ್ಯನಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಕೌಟಿಲ್ಯನು ಚಂದ್ರಗುಪ್ತ ಮೌರ್ಯನ ಪ್ರಧಾನಮಂತ್ರಿಯಾಗಿದ್ದನು.

(b) ಕೌಟಿಲ್ಯನು "ಸಪ್ತಾಂಗ ಸಿದ್ಧಾಂತ"ವನ್ನು ಪ್ರತಿಪಾದಿಸಿದನು.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) ಮತ್ತು (b) ಎರಡೂ ತಪ್ಪಾಗಿವೆ
(2) (a) ಮತ್ತು (b) ಎರಡೂ ಸರಿಯಾಗಿವೆ
(3) (a) ಮಾತ್ರ ಸರಿ
(4) (b) ಮಾತ್ರ ಸರಿ

60. ಕಾಲಾನುಕ್ರಮದಲ್ಲಿ ಬರೆಯಿರಿ.

(a) ಲಾರ್ಡ್ ಮೆಕಾಲೆ ಟಿಪ್ಪಣಿ

(b) ಭಾರತೀಯ ವಿಶ್ವವಿದ್ಯಾನಿಲಯಗಳ ಕಾಯ್ದೆ

(c) ಹಂಟರ್ ಶಿಕ್ಷಣ ಆಯೋಗ

(d) ಚಾರ್ಲ್ಸ್ ವುಡ್ಸ್ ಡಿಸ್‌ಪ್ಯಾಚ್

(1) (a), (c), (d), (b)
(2) (b), (c), (a), (d)
(3) (b), (c), (d), (a)
(4) (a), (d), (c), (b)

61. ಮೀರ್ ಜಾಫರ್‌ನ ಮರಣದ ನಂತರ ಬಂಗಾಳದ ನವಾಬ ಯಾರಾಗಿದ್ದರು?

(1) ನಜೀಮ್-ಉದ್-ದೌಲಾ
(2) ಆಲಿವರ್ದಿ ಖಾನ್
(3) ಷಾ ಆಲಮ್ II
(4) ಮೀರ್ ಕಾಸಿಂ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

62. ಹೊಂದಿಸಿ ಬರೆಯಿರಿ.

| ಪಟ್ಟಿ-I (ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರು) | ಪಟ್ಟಿ-II (ರಾಜ್ಯ) |
|---|---|
| (a) ರಾಣಿ ಅಬ್ಬಕ್ಕ | (i) ಗುಜರಾತ್ |
| (b) ರಾಣಿ ವೇಲು ನಾಚಿಯಾರ್ | (ii) ಕರ್ನಾಟಕ |
| (c) ಮಾತಂಗಿ ಹಜ್ರಾ | (iii) ತಮಿಳುನಾಡು |
| (d) ಉಷಾ ಮೆಹ್ತಾ | (iv) ಪಶ್ಚಿಮ ಬಂಗಾಳ |

ಸಂಕೇತಗಳು:

(1) a – iii, b – iv, c – ii, d – i
(2) a – ii, b – iv, c – i, d – iii
(3) a – ii, b – iv, c – iii, d – i
(4) a – ii, b – iii, c – iv, d – i

63. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಇವರು 'ವಾಗ್ಭೂಷಣ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು.

(b) ಇವರು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದರು.

(c) ಇವರು ಡೆಕ್ಕನ್ ಕಾಲೇಜು ಪುಣೆಯಲ್ಲಿ 1914ರಲ್ಲಿ ನೀಡಿದ ಉಪನ್ಯಾಸದ ಕನ್ನಡ ಅನುವಾದವು ಕನ್ನಡದ ಪ್ರಮುಖ ಕೃತಿಯಾಯಿತು.

ಈ ಮೇಲಿನ ಹೇಳಿಕೆಗಳು ಈ ಕೆಳಗಿನ ಯಾವ ವ್ಯಕ್ತಿಗೆ ಸಂಬಂಧಿಸಿವೆ?

(1) ಕಾರ್ನಾಡ್ ಸದಾಶಿವರಾವ್
(2) ಹುಯಿಲಗೋಳ ನಾರಾಯಣರಾಯ (ರಾವ್)
(3) ಗಂಗಾಧರರಾವ್ ದೇಶಪಾಂಡೆ
(4) ಆಲೂರು ವೆಂಕಟರಾವ್

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



Prepp
Your Personal Exams Guide

64. 1857ರಲ್ಲಿ ವಿವಿಧ ಸ್ಥಳಗಳಲ್ಲಿ ಘಟಿಸಿದ ದಂಗೆಗಳ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.

(1) ಬೆರ್ಹಾಂಪುರ-ಮೀರತ್-ಇಂದೋರ್-ಗ್ವಾಲಿಯರ್

(2) ಬೆರ್ಹಾಂಪುರ-ಇಂದೋರ್-ಮೀರತ್-ಗ್ವಾಲಿಯರ್

(3) ಬೆರ್ಹಾಂಪುರ-ಮೀರತ್-ಗ್ವಾಲಿಯರ್-ಇಂದೋರ್

(4) ಇಂದೋರ್-ಮೀರತ್-ಗ್ವಾಲಿಯರ್-ಬೆರ್ಹಾಂಪುರ

65. ಮೈಸೂರು ನಾಗರಿಕ ಸೇವಾ ಪರೀಕ್ಷೆಯನ್ನು ಪ್ರಾರಂಭಿಸಿದ ಮೈಸೂರಿನ ದಿವಾನರು ಯಾರು ಮತ್ತು ಯಾವಾಗ?

(1) ಸರ್ ಎಂ. ವಿಶ್ವೇಶ್ವರಯ್ಯ ಮತ್ತು 1913

(2) ಸರ್ ಮಿರ್ಜಾ ಇಸ್ಮಾಯಿಲ್ ಮತ್ತು 1927

(3) ಶೇಷಾದ್ರಿ ಅಯ್ಯರ್ ಮತ್ತು 1891

(4) ರಂಗಾಚಾರ್ಲು ಮತ್ತು 1881

66. ಶ್ರೀಧರಾಚಾರ್ಯರು ತಮ್ಮ ಯಾವ ಕೃತಿಯನ್ನು ಸ್ವತಃ 'ಜೋಯಿಸಗಬ್ಬ' ಎಂದು ಕರೆದುಕೊಂಡಿದ್ದಾರೆ?

(1) ಜಾತಕ ತಿಲಕ

(2) ಸರಾವಳಿ

(3) ಚಂದ್ರಪ್ರಭಾ ಚರಿತೆ

(4) ಮದನ ತಿಲಕ

67. ಈ ಕೆಳಗಿನ ಯಾವ ಕೃತಿಗಳನ್ನು ಬಸವಪ್ಪ ಶಾಸ್ತ್ರಿಯವರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ?

(a) ಶಾಕುಂತಲ

(b) ರತ್ನಾವಳಿ

(c) ದಮಯಂತಿ ಚರಿತ್ರೆ

(d) ವಿಕ್ರಮೋರ್ವಶಿಯಂ

ಈ ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

(1) (a), (b) ಮತ್ತು (d)

(2) (b) ಮತ್ತು (d)

(3) (a), (b) ಮತ್ತು (c)

(4) (b), (c) ಮತ್ತು (d)

---

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in



68. 1857 ರ ದಂಗೆಯ ಪರಿಣಾಮದ ಕುರಿತಾದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(i) ಕಂಪನಿಯ ಅಧಿಕಾರ ಅಂತ್ಯಗೊಂಡಿತು

(ii) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯು ಮುಂದುವರೆಯಿತು

(iii) ಶ್ವೇತವರ್ಣೀಯರ ದಂಗೆಗೆ ಕಾರಣವಾಯಿತು

(iv) ರಾಣಿಯ ಘೋಷಣೆಯು ಆಡಳಿತವನ್ನು ಬದಲಾಯಿಸಿತು

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (i), (ii), (iii) ಮತ್ತು (iv) ಸರಿಯಾಗಿವೆ
(2) (i), (iii) ಮತ್ತು (iv) ಸರಿಯಾಗಿವೆ
(3) (ii), (iii) ಮತ್ತು (iv) ಸರಿಯಾಗಿವೆ
(4) (i), (ii) ಮತ್ತು (iii) ಸರಿಯಾಗಿವೆ

69. ಪಟ್ಟಿ-I ರೊಂದಿಗೆ ಪಟ್ಟಿ-II ನ್ನು ಹೊಂದಿಸಿ ಮತ್ತು ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಪ್ರಜಾಸತ್ತಾತ್ಮಕ ಕುಲ) | ಪಟ್ಟಿ-II (ಅಧಿಕಾರ ಸ್ಥಾನಗಳು) |
|---|---|
| (a) ವಿದೇಹರು | (i) ವೈಶಾಲಿ |
| (b) ಲಿಚ್ಛವಿಯರು | (ii) ರಾಮಗ್ರಾಮ |
| (c) ಶಾಕ್ಯರು | (iii) ಮಿಥಿಲಾ |
| (d) ಕೋಲಿಯರು | (iv) ಕಪಿಲವಸ್ತು |

ಸಂಕೇತಗಳು:

(1) a – iii, b – i, c – iv, d – ii
(2) a – iv, b – iii, c – ii, d – i
(3) a – iii, b – iv, c – ii, d – i
(4) a – iv, b – iii, c – i, d – ii

70. ಗೌತಮ ಬುದ್ಧನ ಸಮಕಾಲೀನ ಅರಸ ಯಾರು?

(1) ಅಜಾತಶತ್ರು
(2) ಪ್ರಸೇನಜಿತ
(3) ಹರ್ಷವರ್ಧನ
(4) ಕಾಲಾಶೋಕ

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide



71. ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನ (1924)ದ ಸಮಯದಲ್ಲಿ ಕೊರೆಯಿಸಿದ ಬಾವಿಯನ್ನು ಈ ಕೆಳಕಂಡಂತೆ ಕರೆಯಲಾಗುತ್ತಿತ್ತು.

(1) ಜನ್ನ ಸರೋವರ

(2) ಪೊನ್ನ ಸರೋವರ

(3) ಪಂಪಾ ಸರೋವರ

(4) ರನ್ನ ಸರೋವರ

72. ಪ್ರಾಚೀನ ಭಾರತದ ಮೇಲೆ ದಾಳಿ ಮಾಡಿದ ವಿದೇಶೀ ದಾಳಿಕಾರರನ್ನು ಕಾಲಾನುಕ್ರಮದಲ್ಲಿ ಬರೆಯಿರಿ.

(a) ಗ್ರೀಕರು

(b) ಪರ್ಷಿಯನ್ನರು

(c) ಕುಶಾನರು

(d) ಶಕರು

(1) (c), (a), (b), (d)

(2) (d), (b), (c), (a)

(3) (a), (b), (c), (d)

(4) (b), (a), (d), (c)

73. ಅಶೋಕನ ಕಳಿಂಗ ಯುದ್ಧಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

(a) 13ನೇ ಶಿಲಾಶಾಸನದಲ್ಲಿ ಕಳಿಂಗ ಯುದ್ಧದ ಬಗೆಗೆ ವಿವರಿಸುತ್ತದೆ.

(b) ಕಳಿಂಗ ಯುದ್ಧವು ಅಶೋಕನ ಕೊನೆಯ ಯುದ್ಧವಾಗಿತ್ತು.

ಈ ಕೆಳಗೆ ನೀಡಿದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) ಮತ್ತು (b) ಸರಿಯಾಗಿವೆ

(2) (a) ಮತ್ತು (b) ತಪ್ಪಾಗಿವೆ

(3) (a) ಸರಿ, ಆದರೆ (b) ತಪ್ಪು

(4) (b) ಸರಿ, ಆದರೆ (a) ತಪ್ಪು

74. ಈ ಕೆಳಗಿನ ಯಾವ ಪದ/ಪದಗಳು ಮಹಾವೀರನಿಗೆ ಸಂಬಂಧ ಪಟ್ಟಿದೆ/ಪಟ್ಟಿವೆ?

(a) ವರ್ಧಮಾನ

(b) ನಿರ್ಗ್ರಂಥ

(c) ಜಿನ

(d) ತೀರ್ಥಂಕರ

(1) (a), (b) ಮತ್ತು (c)

(2) (a), (b), (c) ಮತ್ತು (d)

(3) (a) ಮಾತ್ರ

(4) (a) ಮತ್ತು (b)

www.prepp.in



75. ಈ ಕೆಳಗಿನ ಜೋಡಿಗಳಲ್ಲಿ ತಪ್ಪಾಗಿರುವುದನ್ನು ಗುರುತಿಸಿ.


(1) ಅಬ್ದುರ್ ರಜಾಕ್ - ಪರ್ಷಿಯಾ


(2) ಮಾರ್ಕೋ ಪೋಲೋ - ಇಟಲಿ


(3) ಫ್ರಾಂಕೋಯಿಸ್ ಬರ್ನಿಯರ್ - ಪೋರ್ಚುಗಲ್


(4) ಇಬ್ನ್ ಬತೂತ - ಮೊರಾಕ್ಕೊ

76. ನಿಯಮ: ಮುಚ್ಚಿದ ಚಿತ್ರಗಳು ತಮ್ಮ ಬದಿಗಳನ್ನು ಕಳೆದುಕೊಳ್ಳುತ್ತಿವೆ ಮತ್ತು ತೆರೆದ ಚಿತ್ರಗಳು ತಮ್ಮ ಬದಿಗಳನ್ನು ಪಡೆಯುತ್ತಿವೆ. ಸೂಕ್ತವಾದ ಉತ್ತರವನ್ನು ಆರಿಸಿ.

(1) 

(2) 

(3) 


(4) 

www.prepp.in

Prepp
Your Personal Exams Guide

C3

77. ಪ್ರತಿಯೊಂದು ಗುಂಪಿನಲ್ಲಿರುವ ಸಂಖ್ಯೆಗಳು ಒಂದೇ ರೀತಿಯ ಮಾದರಿಯನ್ನು ಅನುಸರಿಸುತ್ತವೆ ಎಂದು ಊಹಿಸಿ, ಕೆಳಗಿನವುಗಳಲ್ಲಿ ಕಾಣೆಯಾಗಿರುವ ಸಂಖ್ಯೆಯನ್ನು ಕಂಡು ಹಿಡಿಯಿರಿ.




(1) 17

(2) 19

(3) 13

(4) 15

78. ABCDಯು ಒಂದು ಚೌಕವಾಗಿದೆ. ಚೌಕದ ಕರ್ಣ BD ಯು 6 ಘಟಕಗಳಾಗಿದ್ದರೆ, ಚೌಕದ ವಿಸ್ತೀರ್ಣವನ್ನು ಕಂಡು ಹಿಡಿಯಿರಿ.

(1) 40

(2) 24

(3) 18

(4) 36

79. ಕೆಳಗಿನ ಸರಣಿಯನ್ನು ಮುಂದೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ ಪೂರ್ಣಗೊಳಿಸಿ.

PUT, POT, PIN, PEN, ?

(1) PET

(2) POT

(3) PAT

(4) PIG


ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide



80. ಈ ಕೆಳಗಿನ ಚಿತ್ರದಲ್ಲಿ ಎಷ್ಟು ತ್ರಿಭುಜಗಳಿವೆ?




(1) 34

(2) 42

(3) 30

(4) 32

81. ಒಂದು ನಿರ್ದಿಷ್ಟ ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ಬ್ಯಾಂಕ್ ಖಾತೆಗಳನ್ನು ಹೊಂದಿರುವ ಗ್ರಾಮಸ್ಥರ ಸಂಖ್ಯೆಯನ್ನು (ಸಾವಿರಗಳಲ್ಲಿ) ಈ ಕೆಳಗೆ ನೀಡಲಾಗಿದೆ.




ಗ್ರಾಮ B ಮತ್ತು ಗ್ರಾಮ C ಗಳಲ್ಲಿ ಕ್ರಮವಾಗಿ ಬ್ಯಾಂಕ್ ಖಾತೆಗಳನ್ನು ಹೊಂದಿರುವ ಗ್ರಾಮಸ್ಥರ ಅನುಪಾತ

(1) 1:8

(2) 42.5:20

(3) 17:8

(4) 8:17

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

Prepp
Your Personal Exams Guide

82. ಒಬ್ಬ ವ್ಯಕ್ತಿಯ ವೇಗ ಗಂಟೆಗೆ 3 ಕಿ.ಮೀ. ಆಗಿದ್ದರೆ, ಅವನು ತನ್ನ ಗಮ್ಯಸ್ಥಾನವನ್ನು 30 ನಿಮಿಷ ತಡವಾಗಿ ತಲುಪುತ್ತಾನೆ. ಮತ್ತು ಅವನ ವೇಗ ಗಂಟೆಗೆ 4 ಕಿ.ಮೀ. ಆಗಿದ್ದರೆ 20 ನಿಮಿಷ ಮೊದಲೇ ತಲುಪುತ್ತಾನೆ. ಹಾಗಾದರೆ ಅವನು ಹೊರಡುವ ಸ್ಥಳದಿಂದ ಅವನ ಗಮ್ಯಸ್ಥಾನಕ್ಕೆ ಇರುವ ದೂರ

(1) 5 ಕಿ.ಮೀ. (2) 7 ಕಿ.ಮೀ.

(3) 10 ಕಿ.ಮೀ. (4) 20 ಕಿ.ಮೀ.

83. ಒಂದು ವಸ್ತುವಿನ ಮಾರುವ ಬೆಲೆಯು ಲಾಭಕ್ಕಿಂತ ₹40 ಜಾಸ್ತಿಯಾಗಿದೆ. ಒಂದು ವೇಳೆ ಖರೀದಿ ಬೆಲೆಯು ಮಾರಾಟದ ಬೆಲೆಯ 40% ಆಗಿದ್ದರೆ ಖರೀದಿ ಬೆಲೆಯನ್ನು ಕಂಡು ಹಿಡಿಯಿರಿ.

(1) ₹35

100 + 40 = 140

(2) ₹40

(3) ₹20

(4) ₹25

84. ಕೆಳಗಿನ ವರ್ಗಗಳಿಗೆ ಸಂಬಂಧಿಸಿದಂತೆ, ಸೂಕ್ತವಾದ ರೇಖಾಚಿತ್ರವನ್ನು ಗುರುತಿಸಿ.


(a) ವಾಣಿಜ್ಯ ಶಾಸ್ತ್ರ


(b) ಲೆಕ್ಕಶಾಸ್ತ್ರ

(c) ವ್ಯವಹಾರ ಅಧ್ಯಯನ

(1) 

(2) 

(3) 


(4) 

www.prepp.in



Prepp
Your Personal Exams Guide

85.




ಬಹುರಾಷ್ಟ್ರೀಯ ಕಂಪನಿಗಳಲ್ಲದ ಕಂಪನಿಗಳ ಸಂಖ್ಯೆಯನ್ನು ಗುರುತಿಸಿ.

(1) 13
(2) 1
(3) 6
(4) 4

86. 15 ಆಗಸ್ಟ್ 2011 ಸೋಮವಾರವಾಗಿದ್ದರೆ, 17 ಸೆಪ್ಟೆಂಬರ್ 2011 ರಂದು ಯಾವ ವಾರವಾಗಿರುತ್ತದೆ?

(1) ಶುಕ್ರವಾರ
(2) ಗುರುವಾರ
(3) ಶನಿವಾರ
(4) ಭಾನುವಾರ

87. Bಯು Aಯ ತಂದೆಯಾಗಿದ್ದಾರೆ, Cಯು Bಯ ತಂದೆಯಾಗಿದ್ದಾರೆ ಮತ್ತು Dಯು Aಯ ತಾಯಿಯಾಗಿದ್ದಾರೆ. ಆಗ Cಯು Dಯೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿದ್ದಾರೆ?

(1) ಮಾವ
(2) ಚಿಕ್ಕಪ್ಪ
(3) ತಂದೆ
(4) ಅಜ್ಜ

88. ರೈಲು ಗಂಟೆಗೆ 72.6 km/hr ನಂತೆ ಚಲಿಸುತ್ತದೆ. ಹಾಗಾದರೆ ಅದು 30 ನಿಮಿಷಗಳಲ್ಲಿ ಎಷ್ಟು ದೂರ (ಮೀಟರುಗಳಲ್ಲಿ) ಕ್ರಮಿಸುತ್ತದೆ?

(1) 33600
(2) 72600
(3) 36800
(4) 36300

ಕಚ್ಚಾ ಕೆಲಸಕ್ಕೆ ಸ್ಥಳ

www.prepp.in

C3

89. ಅನುಕ್ರಮವು 1, 3, 5, 7, 9, .... ಆಗಿರಲಿ. ಹಾಗಾದರೆ ಈ ಅನುಕ್ರಮವು ______

(1) ಹರಾತ್ಮಕ ಅನುಕ್ರಮ (ಹಾರ್ಮೋನಿಕ್)

(2) ಯಾವುದೂ ಅಲ್ಲ

(3) ಅಂಕಗಣಿತದ ಅನುಕ್ರಮ

(4) ಜ್ಯಾಮಿತಿಯ ಅನುಕ್ರಮ

90. 'TARGET' ಪದವನ್ನು ಸಂಕೇತ ಭಾಷೆಯಲ್ಲಿ '201187520' ಎಂದು ಸಂಕೇತಿಸಿದರೆ, 'FORTUNE' ಪದವನ್ನು ಸಂಕೇತಿಸಿದಾಗ ______

(1) 615182021145
(2) 615180212145
(3) 615180221154
(4) 615180212514

91. ಸುಪ್ರೀಂಕೋರ್ಟ್‌ನ ಒಟ್ಟು ಗರಿಷ್ಟ ನ್ಯಾಯಮೂರ್ತಿಗಳ ಸಂಖ್ಯೆ ಎಷ್ಟು?

(1) 30
(2) 25
(3) 38
(4) 33

92. BVD ಯನ್ನು ವಿಸ್ತರಿಸಿ.

BVD ಯು ಅಪರೂಪದ ಎಬೋಲಾ ಸ್ಟ್ರೈನ್ ವೈರಸ್‌ನಿಂದ ಉಂಟಾಗುವ ವೈರಲ್ ಹೆಮರಾಜಿಕ್ (ರಕ್ತಸ್ರಾವ) ಜ್ವರದ ತೀವ್ರ ಸ್ವರೂಪವಾಗಿದೆ. ಇದು ಈಗ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಕೇಂದ್ರೀಕೃತವಾಗಿದೆ.

(1) ಬುಂಡಿಬುಗ್ಯೋ ವೈರಸ್ ಡಿಸೀಸ್

(2) ಬೊಟುಲಿಸಮ್ ವೈರಸ್ ಡಿಸೀಸ್

(3) ಬೈಪೋಲಾರ್ ವೈರಸ್ ಡಿಸೀಸ್

(4) ಬ್ಯಾಬೆಸಿಯೋಸಿಸ್ ವೈರಸ್ ಡಿಸೀಸ್

93. DRDO ಸಂಸ್ಥೆಯು ದೇಶೀಯವಾಗಿ ನಿರ್ಮಿಸಿದ ಯಾವ ವಾಯುಗಾಮಿ ಮುನ್ನೆಚ್ಚರಿಕೆ ಮತ್ತು ನಿಯಂತ್ರಣ (AEW&C) ವ್ಯವಸ್ಥೆಯ ಅಂತಿಮ ಕಾರ್ಯಾಚರಣೆಯ ಪ್ರಮಾಣಪತ್ರ (FOC) ವನ್ನು ಭಾರತೀಯ ವಾಯುಪಡೆಗೆ ಹಸ್ತಾಂತರಿಸುವ ಮೂಲಕ DRDO ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸಿದೆ?

(1) ನೇತ್ರ
(2) ಸಾಬ್ ಗ್ಲೋಬಲ್ ಐ
(3) ಬೆರೈವ್ A-50
(4) ಇಎಲ್/ಡಬ್ಲ್ಯೂ-2090 ಫಾಲ್ಕನ್

ಕಚ್ಚಾ ಕೆಲಸಕ್ಕೆ ಸ್ಥಳ

Prepp
Your Personal Exams Guide



94. ಸೆಪ್ಟಂಬರ್ 1, 2024ರಿಂದ ವಿಶ್ವ ಸಂಸ್ಥೆಯಲ್ಲಿ ಭಾರತದ 24ನೇ ಖಾಯಂ ಪ್ರತಿನಿಧಿಯಾಗಿ ಯಾರು ಸೇವೆ ಸಲ್ಲಿಸುತ್ತಿದ್ದಾರೆ?

(1) ಮುಕ್ತಾ ದತ್ತ ತೋಮರ್
(2) ಅಜಿತ್ ಗುಪ್ತೆ
(3) ರುಚಿರಾ ಕಾಂಬೋಜ್
(4) ಪರ್ವತನೇನಿ ಹರೀಶ್

95. ಇರಾನ್-ಇಸ್ರೇಲ್-ಅಮೇರಿಕಾ ಸಂಘರ್ಷದಲ್ಲಿ ಇರಾನ್ ಯಾವ ಬ್ರಿಟೀಷ್ ದ್ವೀಪದ ಮೇಲೆ ದಾಳಿ ಮಾಡಲು ಯತ್ನಿಸುವ ಮೂಲಕ ತನ್ನ ಬಳಿ ಖಂಡಾಂತರ ಕ್ಷಿಪಣಿಗಳಿರುವುದನ್ನು (ICBM) ಜಗತ್ತಿಗೆ ತೋರಿಸಲೆತ್ನಿಸಿತು?

(1) ಆರ್ಕ್ನಿ ದ್ವೀಪಗಳು
(2) ಶೆಟ್ಲ್ಯಾಂಡ್ ದ್ವೀಪಗಳು
(3) ಚಾನೆಲ್ ದ್ವೀಪಗಳು
(4) ಡಿಯಾಗೋ ಗಾರ್ಸಿಯಾ ದ್ವೀಪಗಳು

96. ಇಂಡಿಯನ್ ನ್ಯಾಷನಲ್ ಸೆಂಟರ್ ಫಾರ್ ಓಶನ್ ಇನ್ಫಾರ್ಮೇಶನ್ ಸರ್ವೀಸಸ್ (INCOIS) ಸಾಗರ ವಲಯಗಳ ಮೇಲೆ ನಡೆಯುತ್ತಿರುವ ಎಲ್ ನಿನೋದ ಸಂಭಾವ್ಯ ಪರಿಣಾಮಗಳನ್ನು ಎತ್ತಿ ತೋರಿಸಲು ವಿಶೇಷ ಎಲ್ ನಿನೋ ಬುಲೆಟಿನ್‌ಗಳನ್ನು ಬಿಡುಗಡೆ ಮಾಡಲು ಪ್ರಾರಂಭಿಸಿತು. ಈ INCOIS ಕೇಂದ್ರ ಕಛೇರಿ ಇಲ್ಲಿದೆ.

(1) ಚೆನ್ನೈ
(2) ಡೆಹ್ರಾಡೂನ್
(3) ಬೆಂಗಳೂರು
(4) ಹೈದರಾಬಾದ್

97. ದೀನ್‌ದಯಾಳ್ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (DAY-NRLM) ಅಡಿಯಲ್ಲಿ ಅಭಿವೃದ್ಧಿ ಪಡಿಸಲಾದ ವೆಬ್ ಮತ್ತು ಮೊಬೈಲ್ ಅಪ್ಲಿಕೇಷನ್ ಯಾವುದು?

(1) DayNOS
(2) VaOS
(3) JanOS
(4) LokOS

www.prepp.in



98. ಮೇ 30, 2026ರಂದು ಪ್ರಾರಂಭಿಸಲಾದ AI ಚಿಂಬಲಿತ CPGRAMS ಧ್ವನಿ ಚಾಟ್‌ಬಾಟ್ ಅನ್ನು ಹೆಸರಿಸಿ. ಇದು ನಾಗರಿಕರು ಸಂವಾದಾತ್ಮಕ ಇಂಟರ್‌ಫೇಸ್ ಮೂಲಕ ತಮ್ಮ ಕುಂದುಕೊರತೆಗಳನ್ನು ನೋಂದಾಯಿಸಲು ಅನುವು ಮಾಡಿ ಕೊಡುತ್ತದೆ.

(1) AskDISHA 2.0

(2) SAMADHAN DIDI

(3) PAi

(4) Su Sahay

99. ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಬಗ್ಗೆ ಸರಿಯಾದ ಹೇಳಿಕೆ/ಗಳನ್ನು ಗುರುತಿಸಿ.

(a) ಅವರು ಭಾರತೀಯ ನೌಕಾಪಡೆಯ ಪ್ರಸ್ತುತ ಮತ್ತು 25ನೇ ಮುಖ್ಯಸ್ಥರು.

(b) ಅವರು ಬೆಂಗಳೂರಿನಲ್ಲಿ ಜನಿಸಿದರು ಮತ್ತು ಬಿಜಾಪುರದ ಸೈನಿಕ ಶಾಲೆಯಲ್ಲಿ ಅಧ್ಯಯನ ಮಾಡಿದರು.

(c) ಅವರು ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯದ ಎರಡನೇ ಕಮಾಂಡಿಂಗ್ ಆಫೀಸರ್ ಆಗಿದ್ದರು.

(1) (a), (b) ಮತ್ತು (c)

(2) (a) ಮತ್ತು (c)

(3) (a) ಮಾತ್ರ

(4) (b) ಮತ್ತು (c)

100. INS ಸುದರ್ಶಿನಿ ಬಗ್ಗೆ ತಪ್ಪಾದ ಹೇಳಿಕೆಗಳನ್ನು ಗುರುತಿಸಿ.

(a) ಇದು ಭಾರತೀಯ ನೌಕಾಪಡೆಗಾಗಿ ದೇಶೀಯವಾಗಿ ನಿರ್ಮಿಸಲಾದ ತ್ರೀ-ಮಾಸ್ಟರ್ಡ್ ನೌಕಾ ತರಬೇತಿ ಹಡಗು.

(b) ಇದನ್ನು ಮಜ಼ಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದೆ.

(c) ಈ ಹಡಗು ಲೋಕಯಾನ 26ನ್ನು ಕೈಗೊಂಡಿದೆ. ಇದು 10 ತಿಂಗಳು, 22,000 ನಾಟಿಕಲ್ ಮೈಲುಗಳಷ್ಟು ಸಾಗರೋತ್ತರ ಲ್ಯಾಂಡ್‌ಮಾರ್ಕ್ ನಿಯೋಜನೆಯಾಗಿದೆ.

(d) ಜನವರಿ 20, 2026 ರಂದು INS ಸುದರ್ಶಿನಿ ಮುಂಬೈನಿಂದ 'ಲೋಕಯಾನ 26' ಕ್ಕೆ ಪ್ರಯಾಣ ಬೆಳೆಸಿತು.

(1) (b) ಮತ್ತು (c)

(2) (a) ಮತ್ತು (d)

(3) (b) ಮತ್ತು (d)

(4) (a) ಮತ್ತು (b)

---